# ಸ್ವಾಮಿ ವಿವೇಕಾನಂದರ ಕರ್ಮಯೋಗ!
# ವಿವೇಕಿ ಜನರ ತತ್ತ್ವಭೋಗ!

ಬ್ರಹ್ಮಚಾರಿ ವಿಭೂತಿಚೈತನ್ಯ

**ಕರ್ಮಯೋಗವು ಪೂಜ್ಯ ಸ್ವಾಮಿ ವಿವೇಕಾನಂದರು ಮಾನವತೆಗೆ ನೀಡಿದ ಬಹು ಅಮೂಲ್ಯ ಕೊಡುಗೆಗಳಲ್ಲಿ ಒಂದು. ಭಗವದ್ಗೀತೆಯ ಕರ್ಮಯೋಗವನ್ನು ಆಧುನಿಕ ಜಗತ್ತಿಗೆ ಪ್ರಭಾವಶಾಲಿಯಾಗಿ ಅಳವಡಿಸಿದ ಅನುಷ್ಠಾನಪ್ರದ ಚಿಂತನೆ ಇದು. ಸ್ವಾಮಿ ವಿವೇಕಾನಂದರ ಕರ್ಮಯೋಗವನ್ನು ಸರಳವಾದ, ಆದರೆ ವಿದ್ವತ್ಪೂರ್ಣವಾದ ಕಾವ್ಯಮಯ ಶೈಲಿಯಲ್ಲಿ ಪ್ರಸ್ತುತಪಡಿಸಿರುವ ಲೇಖಕರು ಸಂಸ್ಕೃತ ವಿದ್ವಾಂಸರು. ರಾಮಕೃಷ್ಣ ಮಠದ ಮುಖ್ಯಕೇಂದ್ರವಾದ ಬೇಲೂರುಮಠದ ಸನಿಹದಲ್ಲಿರುವ ವಿವೇಕಾನಂದ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಇವರು, ಶ್ರೀ ಶ್ರೀಧರ ಸ್ವಾಮಿಗಳು ಭಗವದ್ಗೀತೆಗೆ ಬರೆದಿರುವ ಭಾಷ್ಯವನ್ನು ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.**

### ೧. ಶ್ರೀ ಗುರು–ದೇವ–ಸ್ಮರಣೆ

೧. ದಿವ್ಯ ದೇಶಿಕೇಂದ್ರನನ್ನು [೧]
ಭಕ್ತಿಯಿಂದ ಭಜಿಸುತ ।
ಸೇವ್ಯ ಶ್ರೀಗಣೇಶನನ್ನು
ಸೂಕ್ತಿಯಿಂದ ಸ್ತುತಿಸುತ ॥

೨. ಸದ್ಯ[೨] ವಿದ್ಯೆ ನೀಡಬಲ್ಲ
ಮತಿಯ ದೇವಿಗೆರಗುತ ।
ಪದ್ಯರೂಪದಲ್ಲಿ ಮಲ್ಲ
ಯತಿಯ ವಾಣಿ ಅರ್ಪಿತ ॥

೩. ಧೀರರನ್ನು ಧರೆಗೆ ತೆತ್ತ
ಶರ್ಮದುಲಿಯ[೩] ಕರುನುಡಿ ।
ನೇರವಾಗಿ ತರಲಿ ಇತ್ತ
ಕರ್ಮಯೋಗದೊಳನುಡಿ ॥

೪. ಶ್ರೀವಿವೇಕ ಜನಿಸಿದಂದು
ಪದ್ಯ ಮೊದಲ್ಗೊಂಡಿತು ।
ಶ್ರೀವಿರಾಗಿ ಪಾದಕೊಂದು
ಹೃದ್ಯ[೪] ಸೇವೆ ಸಂದಿತು ॥

೫. ಆ ವಿವೇಕ ಮೂಡಿದಲ್ಲಿ
ಬಾಳು ಹೊನ್ನ ಮಲ್ಲಿಗೆ ।
ಕಾವಿ ಕಾವು ಕೂಡಿದಲ್ಲಿ[೫]
ಹಾಳು ಸುಳಿಯದಲ್ಲಿಗೆ ॥

೬. ನೀ ವಿವೇಕಜ್ಯೋತಿಯಲ್ಲಿ
ಮಿಂದು ಮಾಯೆ ನೀಗಲ್ಶೆ ।
ಧೀ[೬] ವಿಶೇಷ ದೀಪ್ತಿಯಲ್ಲಿ
ನಿಂದು ಮುಕ್ತನಾಗಲ್ಶೆ ॥

### ೨. ವಿಶ್ವವೇ ವಿದ್ಯಾಲಯ ।
### ಕಷ್ಟಸುಖಗಳೇ ಶಿಕ್ಷಕರು ॥

೭. ನೋವು ನಲಿವು ಮುಖ್ಯವಲ್ಲ
ಅರಿವು ನರನ ಲಕ್ಷ್ಯವು ।
ಸಾವು ಸೋಂಕದಾತ್ಮನೆಲ್ಲ
ಸರಿವ ಜಗಕೆ ಸಾಕ್ಷ್ಯವು ॥

೮. ಜ್ಞಾನದತ್ತ ಹೋಗುವಂದು
ಭೋಗ ಬೇನೆ ಎಂಬುದು ।
ಜ್ಞಾನದಾತ ಗುರುವೆ ಎಂದು
ಬಗೆದು ನಡೆದುಕೊಂಬುದು ॥

೯. ಮರ್ತ್ಯ ಆತ್ಮನೆಂಬ ಗುಟ್ಟ
ಸ್ಪಷ್ಟಪಡಿಸಿ ತಿಳಿಸಲು ।
ಕೀರ್ತ್ಯ[೭] ದೇವದೇವನಿಟ್ಟ
ಕಷ್ಟಸುಖದ ಹಾಸಲು[೮] ॥

೧೦. ಕುಟ್ಟಿ ಕಡೆದ ಮೂರ್ತಿಮುಖವು
ಹರನ ಹೋಲುವಂದದಿ ।
ತಟ್ಟಿ ಕಟೆವುದಾರ್ತಿ[೯]ಸುಖವು
ನರನ ಶೀಲ ಚಂದದಿ ॥

೧೧. ಚರಿತೆಯನ್ನು ಓದಿದಲ್ಲಿ
ಭೂಮ[೧೦] ಭಾಗ ಭುವಿಯಲಿ ।
ಅರಿವನಿತ್ತ ಗುರುಗಳಲ್ಲಿ ಬವಣೆ
ಮಿಗಿಲು ಬಲದಲಿ ॥

೧೨. ಮುಖ್ಯ ಗಣ್ಯರೆಲ್ಲ ಹಿಂದೆ
ಹೇಗೆ ಹಿರಿಮೆ ಕಂಡರು?
ಸೌಖ್ಯಕಿಂತ ದುಃಖದಿಂದೆ
ಬೇಗ ಕಲಿತುಕೊಂಡರು ॥

೧೩. ಋದ್ಧಿಗಿಂತ[೧೧] ದೈನ್ಯದಿಂದೆ
ಭ್ರಾಂತಿ ನೀಗಿಕೊಂಡರು ।
ಮುದ್ದಿಗಿಂತ ಗುದ್ದಿನಿಂದೆ
ಕಾವ ಪಡೆದುಕೊಂಡರು ॥

೧೪. ಎಷ್ಟು ಚೆನ್ನ! ಎಷ್ಟು ಭಿನ್ನ!
ಜೀವ ಕಲಿವ ಮಾಟವು ।
ಇಷ್ಟು ನಲ್ಮೆ, ಇಷ್ಟು ಬನ್ನ
ವಿಶ್ವಶಾಲೆ ಪಾಠವು ॥

### ೩. ಎಲ್ಲ ನಿನ್ನೊಳಗೇ ಇದೆ ।
### ಹೊರತರಲು ಕರ್ಮ
### ಸಾಧನವಾಗಿದೆ ॥

೧೫. ಬಾಹ್ಯ ಜಗದೊಳಿಲ್ಲ ಜ್ಞಾನ
ಮನವು ಅರಿವಿನಂಬುಧಿ ।
ಊಹ್ಯ ಪರಿಧಿರಹಿತ ತಾಣ
ಮನದಿ ಜ್ಞಾನ ನಿರವಧಿ ॥

೧೬. ಭೌತ, ಶ್ರೌತ[೧೨] ಜ್ಞಾನಕ್ಕೆಲ್ಲ
ನರನ ಮನವೆ ಮೂಲವು ।
ಧೌತ[೧೩] ಮನದಿ ವಿಶ್ವದೆಲ್ಲ
ಸ್ಫುರಣ ಗ್ರಂಥನಿಲಯವು ॥

೧೭. ಜ್ಞಾನಪ್ರಾಪ್ತಿ ಎಂದರೇನು?
ಮನದ ಪರದೆ ತೆರೆವುದು ।
ಭಾನ[೧೪] ಆತ್ಮ ಬೇರೆಯೇನು?
ಜನದ ಮರವೆ[೧೫] ಸರಿವುದು ॥

೧೮. ಪೂರ್ಣ ಪರದೆ ಸರಿಸಿದಲ್ಲಿ
ಸರ್ವವನ್ನು ಅರಿವನು ।
ಶೀರ್ಣವಾಗದಾತ್ಮದಲ್ಲಿ[೧೬]
ಗರ್ವವಳಿದು ಮೆರೆವನು ॥

೧. ಗುರುಶ್ರೇಷ್ಠನನ್ನು. ದೇಶಿಕ = ಗುರು ; ಇಂದ್ರ = ಶ್ರೇಷ್ಠ. ೨. ಕೂಡಲೆ, ತಕ್ಷಣ. ೩. ಆನಂದ ಕೊಡುವ ಶಬ್ದ, ಮಾತು. ಶರ್ಮ = ಆನಂದ, ಉಲಿ = ನುಡಿ, ಧ್ವನಿ. ೪. ಮನೋಹರವಾದ, ಹೃದಯಕ್ಕೆ ಸಂತೋಷ ಉಂಟುಮಾಡುವ ೫. ಕಾವಿ ಬಣ್ಣ ವೈರಾಗ್ಯದ ಪ್ರತೀಕ. ಕಾವು ಕೊಡುವುದು ಎಂದರೆ ತೀವ್ರಗೊಳ್ಳುವುದು ೬. ಬುದ್ಧಿ, ಜ್ಞಾನ. ೭. ಎಲ್ಲರೂ ಹೊಗಳಬೇಕಾದ, ಎಲ್ಲರೂ ಸ್ತುತಿಸಲು ಅರ್ಹನಾದ ೮. ಬೆಲೆ, ಕಿಮ್ಮತ್ತು, ೯. ದುಃಖ, ಸಂಕಟ ೧೦. ಹೆಚ್ಚು ೧೧. ಸಮೃದ್ಧಿ; ಹಣ – ಕಾಸು, ಧನ–ಧಾನ್ಯ, ಹೇರಳವಾಗಿರುವ ದೆಸೆ. ೧೨. ಶ್ರುತಿಯಿಂದ (ಅಂದರೆ ವೇದಗಳಿಂದ) ದೊರೆವ ಆಧ್ಯಾತ್ಮಿಕ ಜ್ಞಾನ. ೧೩. ಸ್ವಚ್ಛವಾದ, ಶುದ್ಧವಾದ ೧೪. ಜ್ಞಾನ ೧೫. ಅಜ್ಞಾನ. ೧೬. ನಾಶವಿಲ್ಲದ ಆತ್ಮದಲ್ಲಿ. ಶೀರ್ಣವಾಗು = ಒಣಗು, ನಶಿಸು.

೧೯. ತಿಕ್ಕಿದಾಗ ಬೆಂಕಿ ಚಣದಿ
ಕಿಡಿಯುವಂತೆ ಚಕಮುಕಿ ।
ಸಿಕ್ಕಿದಾಗ ಸಲಹೆ ಮನದಿ
ಸಿಡಿವ ಜ್ಞಾನಸ್ಫೋಟಕಿ ॥

೨೦. ವೃಕ್ಷದಿಂದ ಬಿದ್ದ ಸೇಬು
ಸಾರಿತು ನ್ಯೂಟನ್ನಿಗೆ ।
ದಕ್ಷ[೧೭]ಮನ ಗುರುತ್ವದೈಬು[೧೮]
ತೋರಿಕೊಟ್ಟಿತವನಿಗೆ ॥

೨೧. ಸುತ್ತ ಸಲಹೆ ಸಾವಿರಾರು
ಮನವ ತಟ್ಟುತಿರುವುದು ।
ಸುಪ್ತ ಆತ್ಮ ತಮವ ಮೀರು–
ವನಕ ಮಿಡಿಯುತಿರುವುದು ॥

೨೨. ಬಾಳಿನೆಲ್ಲ ಘಟನೆ ಮನವ
ದೂಡುತಿರುವ ಚೋದನೆ ।
ಗಾಳಿಗುದ್ದು ಅಲ್ಲ ! ಅರಿವ
ತೀಡುತಿರುವ ಸೂಚನೆ ॥

೨೩. ನರನು ತನ್ನ ಮನವನಾಗ
ಹೊಕ್ಕು ಪರಾಂಬರಿಸುತ ।
ಹರವಿ ಬಿದ್ದ ತಿಳಿವ ಬೇಗ
ಚೊಕ್ಕ ಕ್ರಮದಲಿರಿಸುತ ॥

೨೪. ಮೂಡುವಂತೆ ಅರಿವು, ಚಿತ್ತ–
ವೃತ್ತಿಯನ್ನು ಹೆಣೆಯುತ ।
ಮಾಡುವಂಥ ಪರಿಯು ಇತ್ತ
ಪೃಥ್ವಿಯಲ್ಲೆ ಅದ್ಭುತ ॥

೨೫. ಬರುವ ಚಿಂತೆ ಭಾವಕೆಲ್ಲ
ನರನ ಮನವೆ ಆಕರ ।
ಕರುಮ ಬಡಿದು ಅವನ್ನೆಲ್ಲ
ಹೊರಗೆ ತರುವ ಮುದ್ಗರ[೧೯] ॥

೨೬. ಅಕ್ಷಿವಾರಿ, ಮಂದಹಾಸ,
ತಾಪ, ನಲಿವು, ರೋದನ ।
ಕುಕ್ಷಿ ಬಿರಿವ ಅಟ್ಟಹಾಸ,
ಶಾಪ, ಆಶಿವಾಚನ ॥

೨೭. ಸ್ತೋತ್ರ, ನಿಂದೆ – ಇವಕ್ಕೆಲ್ಲ
ಮರ್ಮದುಗಮ[೨೦] ಬಲ್ಲೆಯಾ?
ಗೋತ್ರ[೨೧] ನಿನ್ನ ಮನವೆ ! ಎಲ್ಲ
ಕರ್ಮಜನ್ಯ ಒಲ್ಲೆಯಾ ॥

೨೮. ಶಕ್ತಿ ಜ್ಞಾನ ಚಿತ್ತದಲ್ಲಿ
ಗುಪ್ತವಾಗಿ ನೆಲೆಸಿದೆ ।
ಯುಕ್ತಿಪೂರ್ಣ ಕರ್ಮದಲ್ಲಿ
ವ್ಯಕ್ತಗೊಳ್ಳಬಯಸಿದೆ ॥

೨೯. ಅಂತರಂಗ ಧಾಮದಿಂದ
ನಿದ್ದೆಗಿಳಿದ ಬಲಗಳು ।
ಸ್ವಂತ ಶ್ರಮದ ಕಾವಿನಿಂದ
ಎದ್ದು ಬರುವ ಕಲಿಗಳು ॥

## ೪. ಕರ್ಮದ ಛಾಪು । ಶೀಲದ ಮಾಪು ॥

೩೦. ಮೈಮನಸ್ಸು ಮಾತುಗೈವ
ಕರ್ಮ ನಿನ್ನ ಶೀಲವ ।
ಭೈಮಬಲದಿ[೨೨] ತಿದ್ದಿ ಬರೆವ
ಮರ್ಮವರಿಯೊ ಮಾನವ ॥

೩೧. ದೊಡ್ಡಕಾರ್ಯವಲ್ಲ ಮಾಪು
ಶಿಲಶಿಖರವಳೆಯಲು ।
ದಡ್ಡ ಕೂಡ ಮರುಘಿರೆ । ಛಾಪು।
ಎನಿಪ ಕಾಲ ಕೂಡಲು ॥

೩೨. ಚಿಕ್ಕ ಪುಟ್ಟ ಕೆಲಸದಲ್ಲಿ
ಮಾಡು ಘನತೆ ನಿರ್ಣಯ ।
ಚೊಕ್ಕಪಟ್ಟ ಚರಿತೆಯಲ್ಲಿ
ನೋಡು ನರನ ಮೈಮೆಯ ॥

೩೩. ಹಬ್ಬದಂಥ ಹೊತ್ತಿನಲ್ಲಿ
ಮಂಕನಲ್ಲೂ ಹಿರಿತನ ।
ಅಬ್ಬ ! ಮಿಂಚಿನಂತೆ ಚೆಲ್ಲಿ
ಮಂಗಮಾಯ ಮರುಚಣ ॥

೩೪. ಸತ್ಯ ಹಿರಿಮೆ ಇದ್ದರಲ್ಲಿ
ಖಚಿತ[೨೩] ಮಿಂಚಿನಂದದಿ ।
ಸ್ತುತ್ಯ ಚರಿತೆ ಹೊಳೆವುದಲ್ಲಿ
ಉಚಿತ ಸಹಜ ಛಂದದಿ[೨೪] ॥

೩೫. ಪಾಪ ಪುಣ್ಯ ಚಿತ್ತದಲ್ಲಿ
ಇಳಿದು ಸೂಕ್ಷ್ಮರೂಪದಿ ।
ಛಾಪನೀವ ಗುಟ್ಟನಿಲ್ಲಿ
ತಿಳಿದು ಬಾಳು ಯತ್ನದಿ ॥

## ೫. ವಿಶ್ವವೊಂದು ಶಕ್ತಿಸಿಂಧು । ನೀನದರ ಕೇಂದ್ರಬಿಂದು ॥

೩೬. ಜೀವ ಸೆಳೆದು ಕೇಂದ್ರವಾಗಿ
ಸರುವ ಶಕ್ತಿವ್ಯೂಹವ ।
ಸೀವಟಕ್ಕೆ ತುಲ್ಯವಾಗಿ[೨೫]
ತೆರುವ ನವ್ಯ ರೂಹವ[೨೬] ॥

೩೭. ಕೇಡು ನಲ್ಮೆ ನಲಿವು ನೋವ
ಬೆಸೆದು ಶಕ್ತಿಜಲಗಳ ।
ನೋಡು ಮಹತ್ತಾಗಿ ಜೀವ
ಎಸೆವ ಶೀಲದಲೆಗಳ ॥

೩೮. ಸುತ್ತಮುತ್ತ ಕಾಣುವಂಥ
ದ್ರವ್ಯ–ಕ್ರಿಯಾ–ವಿಸ್ಮಿತಿ! ।
ಚಿತ್ತ ದಂಗುಬಡಿಸುವಂಥ
ಭವ್ಯ ಮನುಜ ನಿರ್ಮಿತಿ!! ॥

೩೯. ಏನು ಯಂತ್ರ–ತಂತ್ರ–ಗುಚ್ಛ
ಬೆಳೆದ ನಗರ ಸಂತತಿ ।
ಗೇಣಗಾತ್ರ ನರನ ಇಚ್ಛೆ
ತಳೆದ ಬಾಹ್ಯ ವಿಸ್ತೃತಿ ॥

೪೦. ಶೀಲದಂತೆ ಇಚ್ಛೆ ನೋಡಾ
ಕರ್ಮದಂತೆ ಶೀಲವು ।
ಡೀಲ ಮನವಗೊಳಿಸಬೇಡ
ಕರ್ಮ ಸರ್ವಮೂಲವು ॥

೪೧. ಕ್ರಿಸ್ತ–ಬುದ್ಧರಲ್ಲಿ ಇಚ್ಛೆ
ಬಲವು ಹೇಗೆ ಬಲಿಯಿತು ?
ಧ್ವಸ್ತಗೊಳದ[೨೭] ಶ್ರಮದ ಕಿಚ್ಚೆ
ಛಲದ ಶಕ್ತಿಯಾಯಿತು ॥

೪೨. ಬೆಟ್ಟದಷ್ಟು ಯತ್ನರಾಶಿ
ಕೂಡಿ ಇಚ್ಛೆ ಬೆಳೆವುದು ।
ಪಟ್ಟು ಬಿಡದೆ ಅಹರ್ನಿಶಿ
ಹೂಡಿ ಮನವ ದುಡಿವುದು ॥

೧೭. ಸಮರ್ಥವಾದ ೧೮. ಗುರುತು; ಗುರುತ್ವದ ಐಬು = ಗುರುತ್ವಾಕರ್ಷಣಶಕ್ತಿಯ ಕುರುಹನ್ನು ಅವನ ಸಮರ್ಥವಾದ ಮನಸ್ಸು ತೋರಿಸಿಕೊಟ್ಟಿತು. ೧೯. ಒಂದು ಬಗೆಯ ಆಯುಧ. ೨೦. ರಹಸ್ಯವಾದ ಉತ್ಪತ್ತಿಸ್ಥಾನ. ೨೧ ಮೂಲ. ೨೨. ಭೀಮಬಲದಿಂದ, ಪ್ರಚಂಡವಾದ ಶಕ್ತಿಯಿಂದ ಕೂಡಿ. ೨೩. ಕುಂದಣಿಸಿದ ; ೨೪. ಸುಂದರವಾಗಿ. ೨೫. ಸೀವಟಕ್ಕೆ ಸಮನಾದ. ಹಣ್ಣುಗಳನ್ನು ಸೇರಿಸಿ ಮಾಡುವ ಮಿಶ್ರಣಕ್ಕೆ 'ಸೀವಟ' ಎನ್ನುತ್ತಾರೆ. ಮನುಷ್ಯ ವಿಶ್ವದಲ್ಲಿನ ಶಕ್ತಿಗಳನ್ನು ಸೆಳೆದು ತನ್ನ ವ್ಯಕ್ತಿತ್ವವೆಂಬ ಯಂತ್ರದಲ್ಲಿ ಹೊಸೆದು ಬೆಸೆದು ಹೊಸರೂಪಕೊಟ್ಟು ಮತ್ತೆ ಹೊರಕ್ಕೆಸೆಯುತ್ತಾನೆ. ಅದೇ ಜಗತ್ತಿನಲ್ಲಿ ಅವನ 'ಶೀಲ' ಎನಿಸಿಕೊಳ್ಳುತ್ತದೆ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಆ ಶೀಲ ಸೀವಟದಂತೆ ಮಧುರವಾಗಿರುತ್ತದೋ ಇಲ್ಲವೋ ಎಂಬುದು ಮಾತ್ರ ಅವರವರ ಕೈಯಲ್ಲಿದೆ. ೨೬. ರೂಪವ ೨೭. ಅಳಿಯದ; ನಂದದ